ಭವಿಷ್ಯದ ಬದುಕಿಗಾಗಿ, ನೀರಿನ ಜಾಗೃತೆಗಾಗಿ ವಿಶ್ವ ಜಲದಿನಾಚರಣೆ

ಪಿ. ಅಶೋಕ ☎: 9686609363
ಕೃಷಿ ಸಂಶೋಧನಾ ಕೇಂದ್ರ, ಹನುಮನಮಟ್ಟಿ **ಮಿಂಚಂಚೆ:** ashokap@uasd.com

ಪ್ರತಿ ವರ್ಷ ವಿಶ್ವ ಜಲದಿನ ಆಚರಣೆ ಮಾರ್ಚ್ 22 ರಂದು ಜನರಲ್ಲಿ ನೀರಿನ ಬಳಕೆ, ಉಳಿಕೆ ಹಾಗೂ ಮುಂದಿನ ಪೀಳಿಗೆಗಾಗಿ ಇದರ ಮಹತ್ವದ ಬಗ್ಗೆ ಭಾರತ ಸೇರಿದಂತೆ ವಿಶ್ವದ್ಯಾಂತ ಆಚರಿಸಲಾಗುತ್ತಿದ್ದು, ಈ ವಿಶ್ವ ಜಲದಿನಾಚರಣೆ ಅಂಗವಾಗಿ ಪ್ರತಿ ವರ್ಷ ಘೋಸಿಸುವ ವಾಕ್ಯದಂತೆ ಈ ವರ್ಷವೂ ಕೂಡ ಅಂದರೆ 2024 ರ ಪೋಷಣೆ "ವಾಟರ್ ಫಾರ್ ಫೀಸ್" (Water for peace) ಇದು ಸೂಕ್ತವಾದ ಪೋಷಣೆಯೂ ಆಗಿದೆ ಎನ್ನಬಹುದು.

ವಿಶ್ವ ಜಲದಿನ 2024, 'ಶಾಂತಿಗಾಗಿ ನೀರನ್ನು ಸದ್ಬಳಕೆ ಮಾಡಿಕೊಳ್ಳುವುದು' ಎಂಬ ವಿಷಯದ ಮೇಲೆ ಕೇಂದ್ರೀಕರಿಸುತ್ತದೆ. ವಾರ್ಷಿಕವಾಗಿ ಮಾರ್ಚ್ 22 ರಂದು ಆಚರಿಸಲಾಗುತ್ತದೆ, ವಿಶ್ವ ಜಲ ದಿನವು ನೀರಿನ ಜಾಗೃತಿ ಮಹತ್ವದ ಬಗ್ಗೆ ಮೂಡಿಸುತ್ತದೆ ಮತ್ತು ನೀರು ಮತ್ತು ನೈರ್ಮಲ್ಯ ಬಿಕ್ಕಟ್ಟನ್ನು ನಿಭಾಯಿಸಲು ಕ್ರಮವನ್ನು ಪ್ರೇರೇಪಿಸುತ್ತದೆ. ವಿಶ್ವ ಜಲ ದಿನವು 1993 ರಲ್ಲಿ ಆಚರಣೆಯ ದಿನವಾಯಿತು. ಇದು ಜಾಗತಿಕ ನೀರಿನ ಬಿಕ್ಕಟ್ಟಿನ ಮೇಲೆ ಗಮನವನ್ನು ಕೇಂದ್ರೀಕರಿಸಲು ಮತ್ತು ಸುರಕ್ಷಿತ ನೀರಿನ ಪ್ರವೇಶವಿಲ್ಲದೆ ಬದುಕುತ್ತಿರುವ 2.2 ಶತಕೋಟಿ ಜನರ ಬಗ್ಗೆ ಜಾಗೃತಿ ಮೂಡಿಸಲು ಪ್ರಯತ್ನಿಸುತ್ತದೆ.

ವಿಶ್ವದ ಸಮಸ್ತ "ಜೀವಜಂತು"ಗಳಿಗೆ ಈ ಜಲ 700 ಕೋಟಿ ಮಾನವ ಪ್ರಾಣಿಗಳು ಮತ್ತು ಅದೆಷ್ಟೋ ಲೆಕ್ಕವಿರದ ಸಂಖ್ಯೆಯ ಮಾನವೇತರ ಜೀವಿಗಳಿಗೆ ನೀರು ಜೀವನಾಧಾರ. ಮಾನವನ ದೇಹದ ಒಟ್ಟು ತೂಕದಲ್ಲಿ 60–65% ಭಾಗ ನೀರೆ ಎಂಬುದು ವೈಜ್ಞಾನಿಕ ಸತ್ಯ. ಮಾನವನಿರಬಹುದು. ಇತರೆ ಪ್ರಾಣಿ ಪಕ್ಷಿಗಳಿರಬಹುದು, ಇಲ್ಲವೇ ಸಸ್ಯ ಸಂಕುಲವಿರಬಹುದು, ಇವೆಲ್ಲವುದಕ್ಕೂ ನೀರು ಅತ್ಯಮೂಲ್ಯ. ವರ್ತಮಾನದಲ್ಲಿ ಸಂಶೋಧನೆಗಳು ಹೇಳಿರುವಂತೆ ಈ "ಕ್ಷೀರಪಥ ತಾರಾಗಣ"ದಲ್ಲಿ ಭೂಮಿಮಾತ್ರ ಮಾನವ ವಾಸಯೋಗ್ಯ ತಾಣ ಮತ್ತು ಶುದ್ಧ ಸಿಹಿ ನೀರು ಸಿಗುವ ಏಕೈಕ ಗ್ರಹ ಅಂದರೆ ಇದನ್ನು ಅರ್ಥೈಸಿಕೊಳ್ಳದ ನಾವು ನೀರನ್ನು ಯಥೇಚ್ಚವಾಗಿ ಬಳಸಿ ನೈಸರ್ಗಿಕ ಸಂಪತ್ತನ್ನು ಹಾಳುಗೆಡವುತ್ತಿದ್ದೇವೆ. ಭೂಮಿಯ ಪ್ರತಿಶತ 70 ಭಾಗ ನೀರಿನಿಂದ ಆವರಿಸಿದ್ದರೂ ಕೂಡಾ ಬಳಸಲರ್ಹವಾದ ನೀರಿನ ಕೊರತೆ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿದೆ. ವಿಶ್ವದ ಒಟ್ಟು ಜಲಸಂಪತ್ತು 1264 ದಶಲಕ್ಷ ಕ್ಯೂಬಿಕ್ ಕಿಲೋಮಿಟರ್ ಇದ್ದರೆ ಇದರ ಪ್ರತಿಶತ 94.1 ರಷ್ಟು ಅಂದರೆ 1439.49 ದಶಲಕ್ಷ ಕ್ಯೂಬಿಕ್ ಕಿಲೋಮಿಟರ್‌ನ್ನು ನೀರು ಸಮುದ್ರದಲ್ಲಿ ಸಂಗ್ರಹಣೆಯಾಗಿದ್ದು, ಲವಣಾಂಶದ ಪ್ರಮಾಣ ಶೇಕಡಾ 3.2 ಕ್ಕಿಂತಲೂ ಅಧಿಕವಾಗಿರುವುದಿಲ್ಲ. ಭೂಮಿಯ ಮೇಲಿನ ನೀರಿನ ಇನ್ನುಳಿದ ಶೇಕಡಾ 2.5 ರಷ್ಟು ಅಂದರೆ 46.41 ದಶಲಕ್ಷ ಕ್ಯೂಬಿಕ್ ಕಿಲೋಮಿಟರ್‌ನಷ್ಟು ನೀರು ಮಾತ್ರ ಬಳಸಲರ್ಹ ಅಥವಾ ಸಿಹಿ ನೀರಾಗಿರುತ್ತದೆ. ಈ ಸಿಹಿನೀರಿನ ಬಹುತೇಕ ಭಾಗ ಭೂಮಿಯ ಉತ್ತರ ದ್ರುವದಲ್ಲಿ ಹಿಮದ ರೂಪದಲ್ಲಿ ಹಾಗೂ ಭೂಮಿಯ ಕೆಳಗೆ 60 ಮೀಟರ್‌ಗಿಂತ ಆಳದಲ್ಲಿ ಶೇಖರಣೆಯಾಗಿರುತ್ತದೆ.

ಜೀವನಕ್ಕೆ ಬೆಂಬಲ ನೀಡುವ ಪ್ರಮುಖ ಮತ್ತು ನವೀಕರಿಸಬಹುದಾದ ನೈಸರ್ಗಿಕ ಸಂಪನ್ಮೂಲಗಳಲ್ಲಿ ನೀರು ಒಂದಾಗಿದೆ. ಆದ್ದರಿಂದ ನೀರಿನ ಬಳಕೆಯೂ ವೇಗದಲ್ಲಿ ಹೆಚ್ಚುತ್ತಿದೆ. ಸರಾಸರಿಯಾಗಿ, ಭಾರತವು ಅಂದಾಜು 4000 ಘನ ಕಿ.ಮೀ. ವಾರ್ಷಿಕ ಮಳೆಯನ್ನು ಪಡೆಯುತ್ತದೆ. ಆದಾಗ್ಯೂ ಮಳೆಯ ವಿತರಣೆಯಲ್ಲಿ ಗಣನೀಯವಾದ ಪ್ರಾದೇಶಿಕ ಮತ್ತು ಋತುಗಳ ಮಧ್ಯೆ ಅತೀವ ವ್ಯತ್ಯಾಸಗಳಿವೆ. ಆದ್ದರಿಂದ ದೇಶಾದ್ಯಂತ ಅನಿಯಮಿತ ಮತ್ತು ಏರುಪೇರಿನ ಸಮಯ ಸ್ಥಳಾವಕಾಶದಲ್ಲಿ ನೀರಿನ ಲಭ್ಯತೆ ಇದೆ. ಒಟ್ಟು 4000 ಘನ ಕಿ.ಮೀ. ಮಳೆ ನೀರಿನಲ್ಲಿ 1869 ಘನ ಕಿ.ಮೀ. ಮಾತ್ರ ಲಭ್ಯವಿರುವ ನೀರಿನ ಸಂಪನ್ಮೂಲದಲ್ಲಿ 1123 ಘನ ಕಿ.ಮೀ. ಮಾತ್ರ ಬಳಕೆಗೆ ಯೋಗ್ಯವಾಗಿದೆ. 2000 ನೇ ಇಸವಿಯಲ್ಲಿ ನೀರಿನ ಬೇಡಿಕೆಯು 634 ಘನ ಕಿ.ಮೀ. ಆಗಿತ್ತು ಮತ್ತು 2025 ರ ವೇಳೆಗೆ ಇದು 1092 ಘನ ಕಿ.ಮೀ. ಏರುವ ಸಾಧ್ಯತೆಯಿದೆ. ಜನ ಸಂಖ್ಯೆಯ ತ್ವರಿತ, ಹೆಚ್ಚಿನ ಆಹಾರ ಉತ್ಪಾದನೆ ಮತ್ತು ದೇಶದ ಆರ್ಥಿಕ ಬೆಳವಣಿಗೆಯಿಂದಾಗಿ ನೀರಿನ ಬೇಡಿಕೆಯಲ್ಲಿ ನಿರಂತರ ಹೆಚ್ಚಳ ಕಂಡುಬರುತ್ತಿದೆ. ಮುಂದಿನ ದಿನಗಳಲ್ಲಿ ಹೆಚ್ಚುತ್ತಿರುವ ಜನಸಂಖ್ಯೆಗೆ ನೀರಿನ ಲಭ್ಯತೆ ಕಡಿಮೆಯಾಗುವುದಲ್ಲದೆ ನೀರಿನ ಹಾಹಾಕಾರ ಹೆಚ್ಚಾಗುತ್ತದೆ.

ನೀರಿಲ್ಲದ ಮರವಿಲ್ಲ, ಗಿಡವಿಲ್ಲ, ಬೆಳೆಯಲು ನೀರು ಇಲ್ಲದೆ ಬೇರಿಲ್ಲ ಒಟ್ಟಿನಲ್ಲಿ ಜಗದಲ್ಲಿ ಜೀವಿಗಳಲ್ಲಿ ಸಕಲ ಜೀವಿಗಳ ನಾಡಿ ಮಿಡಿತ ಈ ಜಲರಾಶಿ. ಪ್ರಪಂಚದಾದ್ಯಂತ ಜಾಗತಿಕ ನೀರಿನ ಸಮಸ್ಯ ಗಂಭೀರತೆಯನ್ನು ಸೂಕ್ಷ್ಮವಾಗಿ ಪರಿಶೀಲಿಸಿ, ಅಧ್ಯಯನ ಮಾಡಲು ಜಾಗತಿಕ ಜಲಸಂವರ್ಧನೆ ಚಾವಡಿ (World water forum) ಮೊರಕ್ಕೊ ದೇಶದ ಮಾರಾಕೇಶದಲ್ಲಿ ಜಾಗತಿಕ ಜಲಸಂರ್ಧನೆ ಚಾವಡಿಯ ಮೊದಲನೇ ಸಮ್ಮೇಳನ 1997 ರಲ್ಲಿ ಜರುಗಿತು. ಈ ಸಭೆಯು ಜಗತ್ತಿನ ರಾಜಕಾರಣಿಗಳನ್ನು ನೀರಿನ ಸಮಸ್ಯೆಯ ಬಗ್ಗೆ ಗಂಭೀರ ಚಿಂತನೆ ಮಾಡಲು ಎಚ್ಚರಿಕೆ ಘಂಟೆ ನುಡಿಸಿತು. ಸೆಪ್ಟಂಬರ್ 2002 ರಲ್ಲಿ ಜೋಹಾನ್ಸಬರ್ಗ್‌ದಲ್ಲಿ ನಡೆದ ಸಂಯುಕ್ತ ರಾಷ್ಟ್ರ ಸಭೆಯಲ್ಲಿ "ನಿರಂತರ ಕೃಷಿ" ಬಗ್ಗೆ ಒತ್ತು ನೀಡಿ ನೀರು, ಆಹಾರ ಭದ್ರತೆಯ ಮೂಲ ಎಂಬುದನ್ನು ಧೃಡಪಡಿಸಿತು. ಅಭಿವೃದ್ಧಿ ಹೊಂದುತ್ತಿರುವ ರಾಷ್ಟಗಳಲ್ಲಿನ ನೀರಾವರಿ ಕ್ಷೇತ್ರದ

ಸುಮಾರು ಪ್ರತಿಶತ 20-30 ರಷ್ಟು ಭೂಮಿಯ ಸವಳು ಪ್ರದೇಶವಾಗಿ ಕೃಷಿಗೆ ಅಯೋಗ್ಯವಾಗಿದೆ. ಈ ದೇಶಗಳಲ್ಲಿ ಅಂದಾಜು 12 ದಶಲಕ್ಷ ಹೆಕ್ಟೇರ್ ಪ್ರದೇಶ ಕೃಷಿ ಉತ್ಪಾದನೆಯಿಂದ ವಂಚಿತವಾಗಿದೆ. ಈ ರಾಷ್ಟ್ರಗಳಲ್ಲಿ ಬಳಸಲರ್ಹವಾದ ನೀರಿನ ಶೇಕಡಾ 70 ರಷ್ಟು ನೀರನ್ನು ಕೃಷಿಗಾಗಿಯೇ ಬಳಸಲಾಗುತ್ತಿದೆ. ಹೀಗೆ ಪ್ರತಿ ವರ್ಷದ ಹಾಗೇ ಮಾರ್ಚ್ 22 ರಂದು ಹೊಸ ಉದ್ದೇಶಗಳನ್ನು ಇಟ್ಟುಕೊಂಡು ಆ ಉದ್ದೇಶಗಳನ್ನು ಅರ್ಥಗರ್ಭಿತವಾಗಿ ವರ್ಷ ಪೂರ್ತಿ ಅರ್ಥ ಪೂರ್ಣವಾಗಿ ಆಚರಿಸುವ ಸಂಬಂಧ ಈ ಉದ್ದೇಶಗಳನ್ನು ಜಾಗೃತವಾಗಿ ನೀರಿನ ಸಂರಕ್ಷಣೆಗಾಗಿ ಉಪಯೋಗಿಸುತ್ತಾರೆ. ಒಂದು ವರ್ಷಕ್ಕೆ ಒಂದೊಂದು ಉದ್ದೇಶವನ್ನು ನಿಗದಿ ಮಾಡಿಕೊಂಡು ಆಚರಿಸುತ್ತಾರೆ. ಆ ಉದ್ದೇಶಗಳು ಈ ಕೆಳಗಿನಂತಿವೆ.

ವಿಶ್ವ ಜಲ ದಿನದ 2024 ಜಲದಿನದ ಘೋಷಣೆ **"ವಾಟರ್ ಫಾರ್ ಫೀಸ್"**

ವಿಶ್ವ ಜಲ ದಿನದ 2023 ಜಲದಿನದ ಘೋಷಣೆ **"ಆಕ್ಸಲರೇಟಿಂಗ್ ಚೇಂಜ್"**

ವಿಶ್ವ ಜಲ ದಿನದ 2022 ಜಲದಿನದ ಘೋಷಣೆ **"ಗ್ರೌಂಡ್ ವಾಟರ್"**

ವಿಶ್ವ ಜಲ ದಿನದ 2021 ಜಲದಿನದ ಘೋಷಣೆ **"ವ್ಯಾಲುಹಿಂಗ್ ವಾಟರ್"**

ವಿಶ್ವ ಜಲ ದಿನದ 2020 ಜಲದಿನದ ಘೋಷಣೆ **"ವಾಟರ್ ಅಂಡ್ ಕ್ಲೈಮೇಟ್ ಚೇಂಜ್"**

ವಿಶ್ವ ಜಲ ದಿನದ 2019 ಜಲದಿನದ ಘೋಷಣೆ **"ಲಿವಿಂಗ್ ನೊ ಒನ್ ಬಿಯಂಡ್"**

ವಿಶ್ವ ಜಲ ದಿನದ 2018ರ ಪೋಷಣೆ **"ವಾಟರ್ ಫರ್ ನೇಚರ್"**

ವಿಶ್ವ ಜಲ ದಿನದ 2017ರ ಪೋಷಣೆ **"ವೇಸ್ಟ ವಾಟರ"**

ವಿಶ್ವ ಜಲ ದಿನದ 2016ರ ಪೋಷಣೆ **"ಬೆಟರ್ ವಾಟರ್ ಬೆಟರ್ ಜಾಬ್"**

ವಿಶ್ವ ಜಲ ದಿನದ 2015ರ ಮುಖ್ಯ ಉದ್ದೇಶ **"ವಾಟರ್ ಅಂಡ್ ಸಸ್ಟೇನೆಬಲ್ ಡೆವಲಪಮೆಂಟ್"**

ವಿಶ್ವ ಜಲ ದಿನದ 2014ರ ಮುಖ್ಯ ಉದ್ದೇಶ **"ವಾಟರ್ ಅಂಡ್ ಇನರ್ಜಿ"**

ವಿಶ್ವ ಜಲ ದಿನದ 2013ರ ಮುಖ್ಯ ಉದ್ದೇಶ **"ವಾಟರ್ ಕೊರಪೋರೇಷನ್"**

ವಿಶ್ವ ಜಲ ದಿನದ 2012ರ ಮುಖ್ಯ ಉದ್ದೇಶ **"ವಾಟರ್ ಅಂಡ್ ಫುಡ್ ಸೆಕ್ಯುರಿಟಿ"**

ವಿಶ್ವ ಜಲ ದಿನದ 2011ರ ಮುಖ್ಯ ಉದ್ದೇಶ **"ವಾಟರ್ ಫರ್ ಸಿಟಿಸ್: ರೆಸ್ಪೊಂಡಿಂಗ್ ಟು ಅರ್ಬನ್ ಚ್ಯಾಲೆಂಜ್"**

ವಿಶ್ವ ಜಲ ದಿನದ 2010ರ ಮುಖ್ಯ ಉದ್ದೇಶ **"ವಾಟರ್ ಕ್ಲೀನ್ ವಾಟರ್ ಫರ್ ಎ ಹೆಲ್ತಿ ವರ್ಲ್ಡ"**

ವಿಶ್ವ ಜಲ ದಿನದ 2009ರ ಮುಖ್ಯ ಉದ್ದೇಶ **"ಟ್ರಾನ್ಸ್ ವಾಟರ್"**

ವಿಶ್ವ ಜಲ ದಿನದ 2008ರ ಮುಖ್ಯ ಉದ್ದೇಶ **"ಸ್ಯಾನಿಟೇಷನ್"**

ವಿಶ್ವ ಜಲ ದಿನದ 2007ರ ಮುಖ್ಯ ಉದ್ದೇಶ **"ಕೊಪಿಂಗ್ ವಿತ್ ವಾಟರ್ ಸೆಕರ್ಸಿಟಿ."**

ವಿಶ್ವ ಜಲ ದಿನದ 2006ರ ಮುಖ್ಯ ಉದ್ದೇಶ **"ವಾಟರ್ ಅಂಡ್ ಕಲ್ಚರ್"**

ವಿಶ್ವ ಜಲ ದಿನದ 2005ರ ಮುಖ್ಯ ಉದ್ದೇಶ **"ವಾಟರ್ ಫರ್ ಲೈಫ್ 2005-2015"**

ವಿಶ್ವ ಜಲ ದಿನದ 2004ರ ಮುಖ್ಯ ಉದ್ದೇಶ **"ವಾಟರ್ ಅಂಡ್ ಡಿಸಸ್ಟರ್ಸ್"**

ವಿಶ್ವ ಜಲ ದಿನದ 2003ರ ಮುಖ್ಯ ಉದ್ದೇಶ **"ವಾಟರ್ ಫಾರ್ ಫ್ಯೂಚರ್"**

ವಿಶ್ವ ಜಲ ದಿನದ 2002ರ ಮುಖ್ಯ ಉದ್ದೇಶ **"ವಾಟರ್ ಫರ್ ಡೆವಲ್‌ಪಮೆಂಟ್"**

ವಿಶ್ವ ಜಲ ದಿನದ 2001ರ ಮುಖ್ಯ ಉದ್ದೇಶ **"ವಾಟರ್ ಫಾರ್ ಹೆಲ್ತ್"**

ವಿಶ್ವ ಜಲ ದಿನದ 2000ರ ಮುಖ್ಯ ಉದ್ದೇಶ **"ವಾಟರ್ ಫರ್ ದಿ 21 ಸೆಂಚುರಿ"**

ವಿಶ್ವ ಜಲ ದಿನದ 1999ರ ಮುಖ್ಯ ಉದ್ದೇಶ **"ಎವರಿ ಒನ್ ಲೈವ್ಸ್ ಡೌನ್ ಸ್ಟ್ರೀಮ್"**

ವಿಶ್ವ ಜಲ ದಿನದ 1998ರ ಮುಖ್ಯ ಉದ್ದೇಶ **"ಗ್ರೌಂಡ್ ವಾಟರ್ ದ ಇನ್‌ವಿಸಿಬಲ್"**

ವಿಶ್ವ ಜಲ ದಿನದ 1997ರ ಮುಖ್ಯ ಉದ್ದೇಶ ದ **"ವರ್ಲ್ಡ್‌ಸ್ ವಾಟರ್: ಇಸ್ ದೇರ್ ಇನ್ಫ್"**

ವಿಶ್ವ ಜಲ ದಿನದ 1996ರ ಮುಖ್ಯ ಉದ್ದೇಶ **"ವಾಟರ್ ಫಾರ್ ಥರಸ್ಟಿ ಸಿಟಿಸ್"**

ವಿಶ್ವ ಜಲ ದಿನದ 1995ರ ಮುಖ್ಯ ಉದ್ದೇಶ **"ವುಮನ್ ಅಂಡ ವಾಟರ್"**

ವಿಶ್ವ ಜಲ ದಿನದ 1994ರ ಮುಖ್ಯ ಉದ್ದೇಶ **"ಕೇರಿಂಗ್ ಫಾರ್ ಅವರ್ ವಾಟರ್ ರಿಸೊರ್ಸ ಇಸ್ ಎವ್ವರಿ ಬಾಡಿ"**

ವಿಶ್ವ ಜಲ ದಿನದ 1993ರ ಮುಖ್ಯ ಉದ್ದೇಶ **"ವಾಟರ್ ಫಾರ್ ಸೀಟಿಸ್"**

ರೈತ ಮೋಡಗಳೊಂದಿಗೆ ಅದು ಸುರಿಸುವ ಮಳೆಯೊಂದಿಗೆ ಕೃಷಿಯ ಚಟುವಟಿಕೆಗಳನ್ನು ಪ್ರಾರಂಭಿಸುತ್ತಾನೆ. ಕೃಷಿ ಪದ್ಧತಿಯಲ್ಲಿ ನೀರಿನ ಸದುಪಯೋಗ ಅತಿ ಅವಶ್ಯಕ, ನೀರಿನ ಸದ್ಬಳಕೆಯಾಗದಿದ್ದ ಪಕ್ಷದಲ್ಲಿ ಮುಂದಿನ ದಿನಗಳಲ್ಲಿ ಮನುಷ್ಯ, ಪ್ರಾಣಿ, ಪಕ್ಷಿಗಳು

ಅನುಭವಿಸಬಹುದಾದ ಕಷ್ಟ ನಷ್ಟಗಳನ್ನು ಊಹಿಸಲು ಅಸಾಧ್ಯ. ಮಳೆಯಿಂದ ಇಳೆ ಪಡೆದುಕೊಂಡ ನೀರನ್ನು ಸಮರ್ಪಕ ರೀತಿಯಲ್ಲಿ ಒಂದೆಡೆ ನಿಲ್ಲಿಸಿ ಶೇಖರಿಸಿ ಅದರ ಉಪಯೋಗ ಪಡೆಯದೇ ಇದ್ದರೆ ಹೇಗೆ? ನದಿಗಳನ್ನು ಕೆರೆಕಟ್ಟೆಗಳನ್ನು ಸರಿಯಾಗಿ ಬಳಸಿಕೊಳ್ಳದೆ ಇದ್ದರೆ ಜನರ ಕಷ್ಟಗಳು ಕೊನೆಗೊಳ್ಳುವುದೆ ಯಾವಾಗ? ಅದರಲ್ಲಿ ನೀರಿನ ಬಗ್ಗೆ ತಿಳುವಳಿಕೆ ನೀಡುವುದರ ಮೂಲಕ ಅವರಲ್ಲಿ ಜಾಗೃತಿ ಮೂಡಿಸಿ, ಅವರನ್ನೆಲ್ಲಾ ಒಂದು ಮಾಡಿ ಸರ್ಕಾರದ, ಅರೇ ಸರ್ಕಾರಿ ಸಂಸ್ಥೆಗಳ ಸಹಾಯ ಪಡೆದು ಸ್ಥಳೀಯವಾದ ಕೆರೆಕಟ್ಟೆಗಳು, ಹಳ್ಳಕೊಳ್ಳಗಳಲ್ಲಿ ನೀರು ನಿಲ್ಲುವುದಕ್ಕೆ ವ್ಯವಸ್ಥೆ ಮಾಡಬೇಕು. ಕಳೆದೆರೆಡು ವರ್ಷಗಳಲ್ಲಿ ರಾಜ್ಯ ಹಾಗೂ ರಾಷ್ಟ್ರ ಅನುಭವಿಸಿದ ಬರ ಹಾಗೂ ಅದರ ನೆರಳಲ್ಲಿ ಬೆಂದು ಹೋಗಿರುವ ಜನತೆ ಹಸಿರಿನ ಮುಖವನ್ನು ನೋಡಲು ಹವಣಿಸುತ್ತಿದ್ದಾರೆ. ಒಳ್ಳೆಯ ಮಳೆಯಾದರೆ ವರ್ಷದ ಪ್ರಾರಂಭದಲ್ಲೇ ರೈತರ, ಜನ ಮನಗಳ ಮುಖದಲ್ಲಿ ಅತೀವ ಹರ್ಷವನ್ನು ಮೂಡಿಸುತ್ತಿದೆ. ಈ ಹರ್ಷ ಶಾಶ್ವತವಾಗಿರಬೇಕಾದರೆ ನೀರಿನ ಸದ್ಬಳಕೆ ಹಾಗೂ ಶೇಖರಣೆ ಅತಿ ಮುಖ್ಯವಾದುದು. ನಮ್ಮ ದೇಶದಲ್ಲಿ ಕೃಷಿಗಾಗಿ ಬಳಸುವ ನೀರಿನ ಪ್ರಾಮಾಣದ ಶೇಕಡಾ 45 ರಷ್ಟು ಭತ್ತದ ಬೆಳೆಗೆ ಬಳಸುತ್ತಿರುವುದು ವಿಶೇಷವಾಗಿದೆ, ತಮಿಳುನಾಡಿನಲ್ಲಿ ಶೇಕಡಾ 80 ರಷ್ಟು ಕೃಷಿ ಬಳಕೆಯ ನೀರು ಭತ್ತದ ಬೆಳೆಗೆ ಬಳಸಲ್ಪಡುತ್ತದೆ. ಕೆಲವು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಾದ ಈಜಿಪ್ಟ್ ಹಾಗೂ ಕೋರಿಯಾಗಳಲ್ಲಿ ಭತ್ತದ ಸರಾಸರಿ ಇಳುವರಿಯು ಹೆಕ್ಟೇರಿಗೆ 10–12 ಟನ್‌ಗಳಾಗಿದ್ದರೆ, ನಮ್ಮ ದೇಶದ ಭತ್ತದ ಸರಾಸರಿ ಇಳುವರಿಯು ಕೇವಲ ಹೆಕ್ಟೇರಿಗೆ 4–5 ಟನ್ ಮಾತ್ರ. ವೈಜ್ಞಾನಿಕವಾಗಿ ಭತ್ತದ ಬೆಳೆಗೆ ಸರಾಸರಿ 800–1000 ಮಿಲಿ ಮೀಟರ್ ನೀರು ಸಾಕಾಗುವುದೆಂದು ತಿಳಿದುಬಂದಿದೆ.

ಕೃಷಿಯಲ್ಲಿ ಕೃಷಿ ಬೆಳೆಗಳಾದ ಕಬ್ಬು, ಭತ್ತ ಹೀಗೆ ಮುಂತಾದ ತೋಟಗಾರಿಕೆ ಬೆಳೆಗಳ ಹೆಚ್ಚಿನ ನೀರಿನ ಬೇಡಿಕೆಯಿದ್ದು, ರೈತರು ಆ ವೈಜ್ಞಾನಿಕ ದೃಷ್ಟಿಯಿಂದ ಬೆಳೆಗಳಿಗೆ ನೀರು ಬಳಸುತ್ತಾರೆ. ಜಾನುವಾರುಗಳ ಮೇವಿನ ಬೆಳೆಗಳನ್ನು ಉತ್ಪಾದಿಸುವ ಕತ್ತರಿಸುವುದು ಮತ್ತು ಮಾಂಸ, ಹಾಲು ಮತ್ತು ಇತರ ಹಾಲಿನ ಉತ್ಪನ್ನಗಳ ಸಂಸ್ಕರಣೆಗೆ ನೀರು ದೊಡ್ಡ ಪ್ರಮಾಣದಲ್ಲಿ ಅಗತ್ಯ. ಕೃಷಿ ಕೈಗಾರಿಕೆ ಹೈನುಗಾರಿಕೆ ಮತ್ತು ನಮ್ಮ ದಿನನಿತ್ಯದ ಬಳಕೆಗಾಗಿ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ದಿನವೊಂದಕ್ಕೆ ಸಾವಿರಾರು ಲೀಟರ್ ನೀರು ನಮ್ಮಿಂದ ವ್ಯಯಿಸಲ್ಪಡುತ್ತಿದೆ. ಹಾಗಾದರೆ ನೀರನ್ನು ಬಳಸದೆ ಬದುಕುವುದು ಹೇಗೆ? ಎಂಬ ಪ್ರಶ್ನೆ ಉದ್ಭವಿಸಬಹುದು. ಹೌದು ಜಲವಿರದ ಈ ಜೀವವಿರದು ಎಂಬುದು ಪ್ರತ್ಯಕ್ಷ ಸತ್ಯ. ಆದರೆ ಬಳಕೆಗೆ ಒಂದು ಇತಿ ಮಿತಿಯನ್ನು ಗುರುತಿಸಬಹುದಲ್ಲವೇ? ನೀರನ್ನು ವಿನಾಕಾರಣ ಪೋಲು ಮಾಡುವ ಬದಲು ಅದನ್ನು ಸದ್ವಿನಿಯೋಗಪಡಿಸಿಕೊಳ್ಳಬೇಕೆಂಬುದೇ ನಮ್ಮ ಉದ್ದೇಶವಾಗಬಾರದೇಕೆ?

ಈ ಭೂಮಿಯ ಮೇಲಿರುವ ನೀರಿನ ತೀರಾ ಕನಿಷ್ಠ ಭಾಗ ಮಾತ್ರ ಬಳಕೆ ಯೋಗ್ಯವೆಂತಲೋ, ಮುಂದಿನ ಮಹಾಯುದ್ಧ ನಡೆಯುವುದಿದ್ದರೆ ಅದು ನೀರಿಗಾಗಿ ಎಂತಲೋ. ಒಟ್ಟಾರೆ ಸುಂದರ ನೀರಿನ ಬಗೆಗೆ ಒಂದು ಭಯಂಕರ ಚಿತ್ರಣ ಮುಂದೊಡ್ಡಿ ಎಲ್ಲವೂ ಮುಗಿಯಿತೆಂಬಂತೆ ಹೊರಡುವುದು ನಮಗೆ ಅಭ್ಯಾಸವಾಗಿ ಬಿಟ್ಟಿದೆ. ಈ ವರ್ಷವೂ ಅಂಥದ್ದೇ ಒಂದು ಜಲದಿನ (ಮಾ. 22) ಬಂದಿದೆ. ಆಚರಿಸಿ ಮುಗಿಸಿದ್ದೇವೆ. ವಿಶ್ವಾದ್ಯಂತ ಜಲಾಭಾವದ ಬಗೆಗೆ ತೀವ್ರ ಚರ್ಚೆ ಎದ್ದಿತ್ತು. ಅರಿವಿನ ಕೊರತೆಯೇ ನೀರಿನ ನಿರ್ವಹಣೆಯಲ್ಲಿನ ವೈಫಲ್ಯಕ್ಕೆ ಕಾರಣವೆಂಬ ವಾದವನ್ನು ತಜ್ಞರು ಮುಂದಿಟ್ಟಿದ್ದರು. ಇದೆಲ್ಲವುದರ ಅರಿವುಗಳ ನಡುವೆ ಮತ್ತದೇ ಗೊಣಗಾಟಗಳ ನಡುವೆ ಇನ್ನೊಂದು "ವಿಶ್ವ ಜಲ ದಿನ" ಸದ್ದಿಲ್ಲದೇ ಆಗಮಿಸುತ್ತಿದೆ. ಈ ಜಲ ದಿನವನ್ನು ನಿಜವಾದ ಅರ್ಥದಲ್ಲಿ ಪ್ರತಿಯೊಬ್ಬ ನಾಗರೀಕನಿಗೂ ಇದರ ಮಹತ್ವವನ್ನು ಸಾರಿ ಹೇಳುವ ಅರ್ಥಮಾಡಿಸುವ ಅಗತ್ಯವಿದೆ.

****

ಎಳೆನೀರಿನಲ್ಲಿರುವ ಪೋಷಕಾಂಶಗಳು

'ಕಲ್ಪವೃಕ್ಷ' ವೆನಿಸಿಕೊಂಡಿರುವ ತೆಂಗು ರಾಜ್ಯದ ಮುಖ್ಯ ವಾಣಿಜ್ಯ ಬೆಳೆಗಳಲ್ಲೊಂದು. ಇದು ಆಹಾರ (ಎಣ್ಣೆ), ಒಣಕೊಬ್ಬರಿ, ಪಾನೀಯ ಮತ್ತು ಉರುವಲು ವಸ್ತುಗಳನ್ನು ಒದಗಿಸುವುದಲ್ಲದೇ ಹಲವಾರು ಕೈಗಾರಿಕೆಗಳಿಗೆ ಕಚ್ಚಾ ಪದಾರ್ಥಗಳನ್ನು ಒದಗಿಸುವುದು. ಕೊಬ್ಬು ಮತ್ತು ಹಲವು ಜೀವಸತ್ವಗಳನ್ನು ಹೊಂದಿರುವುದರಿಂದ ಪಿಷ್ಟಯುಕ್ತ ಆಹಾರ ಪದಾರ್ಥಗಳಲ್ಲಿಯ ಕೊರತೆಗಳನ್ನು ಸರಿದೂಗಿಸುತ್ತದೆ. ಎಳನೀರು ಶೇ. 95.5 ರಷ್ಟು ನೀರೀನಾಂಶ, ಶೇ.0.1–1 ರಷ್ಟು ಸಸಾರಜನಕ, ಶೇ. 4 ರಷ್ಟು ಶರ್ಕರಪಿಷ್ಟಗಳು, ಶೇ. 0.02 ಕ್ಯಾಲ್ಸಿಯಂ, ಶೇ. 0.01 ರಂಜಕ ಮತ್ತು 0.05 ಮಿ. ಗ್ರಾಂ (100 ಗ್ರಾಂ ಗೆ) ಕಬ್ಬಿಣದ ಅಂಶವನ್ನು ಒಳಗೊಂಡಿರುತ್ತದೆ. ಪ್ರತಿ 100 ಮಿ.ಲೀ. ಎಳೆನೀರಿನಲ್ಲಿ 2.2–3.7 ಮಿ.ಗ್ರಾಂ ನಷ್ಟು 'ಸಿ' ಜೀವಸತ್ವವಿರುತ್ತದೆ. ಇಷ್ಟೇ ಅಲ್ಲದೆ ಪೊಟ್ಯಾಷಿಯಂ, ಸೋಡಿಯಂ ಮತ್ತು ಇತರೆ ಖನಿಜಾಂಶಗಳನ್ನು ಒಳಗೊಂಡಿರುತ್ತದೆ. ತಾಜಾ ಕೊಬ್ಬರಿ ಶೇ. 45 ರಷ್ಟು ತೇವಾಂಶ, ಶೇ. 4 ರಷ್ಟು ಸಸಾರಜನಕ, ಶೇ. 33 ರಷ್ಟು ಕೊಬ್ಬು, ಶೇ. 4 ರಷ್ಟು ಖನಿಜಾಂಶಗಳು ಮತ್ತು ಶೇ. 10 ರಷ್ಟು ಶರ್ಕರಪಿಷ್ಟ ಹೊಂದಿರುತ್ತದೆ.

ಆಧಾರ: ಸಮಗ್ರ ತೋಟಗಾರಿಕೆ ಕೈಪಿಡಿ